ಸಿವಿಲ್ ಸರ್ವೀಸ್ ಕಾಂಡಕ್ಟ್ ರೂಲ್ಸ್‌ನಲ್ಲಿ ಇಂಟರ್‌ಫ್ರಿಟ್ ಮಾಡುವ ಕೆಲಸ ಅವರದಾಗಿದ್ದು ಬಹುತೇಕ ಅದೇ ಕೆಲಸ ಮಾಡುತ್ತಿರುತ್ತಾರೆ. ಆದೊಂದು quasi judicial authoriy independent of the Government. ಆದು ಇರಲೆಂದು ಆ ಕೆಲಸ ಮಾಡಿದ್ದೇವೆ. ಹಾಗೆಯೇ, ಅವರು ಮಾಹಿತಿ ಕೊಡದೆ ಹೋದರೆ ಅವರಿಗೆ ಎರಡು ಸಾವಿರ ರೂಪಾಯಿಗಳವರೆಗೆ ಪೆನಾಲ್ಟಿ ಇಂಪೋಸ್ ಮಾಡಿದ್ದೇವೆ. ಪೆನಾಲ್ಟಿಯನ್ನು ಮ್ಯಾಂಡೇಟರಿಯಾಗಿ ಇಂಪೋಸ್ ಮಾಡಬಹುದಾಗಿದೆ ಮತ್ತು ಮಾಹಿತಿ ನೀಡಲು ಯಾವ ಅಧಿಕಾರಿ ವಿನಾಕಾರಣ ನಿರಾಕರಿಸುತ್ತಾರೋ, ಅಲ್ಲಿ ಪೆನಾಲ್ಟಿ ಜಾಸ್ತಿ ಇರಬೇಕೆಂದು ಕೆಲವರ ಅಭಿಪ್ರಾಯವಿದೆ. ನಾನು ಏತಕ್ಕೆ ಈ ಕನ್‌ಕ್ಲೂಶನ್‌ಗೆ ಬಂದೆನೆಂದರೆ, ನಮ್ಮ ದೇಶದ ಎಲ್ಲಾ ಕಾನೂನುಗಳನ್ನು ಹಾಗೂ ಇತರ ನಾಲ್ಕೈದು ದೇಶಗಳ ಕಾನೂನುಗಳನ್ನು ತೆಗೆದುಕೊಂಡು ಅಭ್ಯಾಸ ಮಾಡಿ ನೋಡಿದ ನಂತರ ನಮ್ಮ ನೆಲದ ಮಟ್ಟದಲ್ಲಿ ಏನಾಗಬಹುದೆಂದು ವಿಚಾರ ಮಾಡಿ ಈ ರೀತಿ ಹಾಕಿದ್ದೇವೆ. ಇದರಲ್ಲಿ ಮುಖ್ಯವಾದ ಎರಡು ವಿನಾಯಿತಿಗಳಿವೆ. ಸಚಿವ ಸಂಪುಟದಲ್ಲಿ ತೀರ್ಮಾನವಾದ ವಿಷಯಗಳ ಬಗ್ಗೆ ವಿವರಗಳು ಯಾರಿಗೂ ಸಿಗುವುದಿಲ್ಲ. ಈ ದೇಶದ ಗೋವಾ ರಾಜ್ಯದಲ್ಲಿ ಮಾತ್ರ ಈ ರೀತಿಯ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಏನೆಂದರೆ, ಆ ರಾಜ್ಯದ ಸಾಕ್ಷರತೆಯ ಪ್ರಮಾಣ ಹೆಚ್ಚಿದೆ. ಅದು ಚಿಕ್ಕ ರಾಜ್ಯವಾಗಿರುವುದರಿಂದ ಅಲ್ಲಿ ಯಾವ ಕಾರಣಕ್ಕೆ ಸಚಿವ ಸಂಪುಟದಲ್ಲಿ ತೀರ್ಮಾನವಾದ ವಿಷಯಗಳ ವಿವರಗಳನ್ನು ಮಸೂದೆ ಮುಖಾಂತರ ಕಲ್ಪಿಸಿಕೊಟ್ಟರೋ ನನಗೆ ಗೊತ್ತಿಲ್ಲ. ಬೇರೆಲ್ಲೂ ಕೂಡ ಆ ರೀತಿಯ ವ್ಯವಸ್ಥೆಯಿಲ್ಲ. ಯುನೈಟೆಡ್ ಕಿಂಗ್‌ಡಮ್‌ನ ಪಾರ್ಲಿಮೆಂಟ್‌ನಲ್ಲೂ ಕೂಡ ಈ ಹಕ್ಕು ಕೊಟ್ಟಿಲ್ಲ. ಆದುದರಿಂದ, ಅದನ್ನು ನಾವು ಬಿಟ್ಟಿದ್ದೇವೆ. ಮಸೂದೆಯ 4(2)(ಡಿ)ನಲ್ಲಿ ತಿಳಿಸಿರುವಂತೆ ಡಿಪಾರ್ಟ್‌ಮೆಂಟ್ ಚರ್ಚೆ ಏನಾಗುತ್ತದೆ, ನೋಟ್ಸ್ ಇರಬಹುದು, ಎವಿಡೆನ್ಸ್ ಇರಬಹುದು, ಒಪಿನಿಯನ್ ಇರಬಹುದು; ನಿರ್ಧಾರವಾದ ನಂತರ ಅದರ ಪ್ರತಿಗಳು ಸಿಗಬೇಕೆನ್ನುವ ರೀತಿಯಲ್ಲಿ ಮಾಡಿದ್ದೇವೆ. ಅನಂತರ, ಟ್ರೇಡ್ ಅಂಡ್ ಕಮರ್ಷಿಯಲ್ ಸೀಕ್ರೆಟ್ಸ್, ಇದೂ ಕೂಡ ಪ್ರತಿಯೊಂದು ಲೆಜಿಸ್ಲೇಶನ್‌ನಲ್ಲೂ ಇದೆ. ಟ್ರೇಡ್ ಅಂಡ್ ಕಮರ್ಷಿಯಲ್ ಸೀಕ್ರೆಟ್ಸ್, ಇದ್ದರೆ ಅದರ ಬಗ್ಗೆಯೂ ಮಾಹಿತಿ ಕೊಡಬಾರದೆಂದು ಇದೆ. ಯಾರೂ ಕೂಡ ಇದನ್ನು ಹೆದರಿಕೊಂಡು ನೋಡುವಂಥ ವಿಚಾರವಲ್ಲವೆಂದು ನನಗನ್ನಿಸುತ್ತದೆ. ಯಾರೇ ಕೈಗಾರಿಕೋದ್ಯಮಿಗಳಾಗಲಿ, ಬೇರೆಯವರಾಗಲಿ, ಕಡ್ಡಾಯವಾಗಿ ಇನ್‌ಫರ್ಮೇಷನ್ ಅನ್ನು ಜನರಿಗೆ ಕೊಡಬೇಕೆಂಬುದೇ ನಮ್ಮ ಉದ್ದೇಶ ಮತ್ತು ಇದು ನಮ್ಮ ಆದ್ಯ ಕರ್ತವ್ಯವೆಂದು ಭಾವಿಸುತ್ತೇನೆ. ಇಷ್ಟು ಹೇಳಿ ಮಾನ್ಯ ಸದಸ್ಯರುಗಳು ಈ ವಿಧೇಯಕವನ್ನು ಬೆಂಬಲಿಸಿ ಅಂಗೀಕರಿಸಿಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

7. ಪ್ರಕಟಣೆ

ಅಧ್ಯಕ್ಷರು :— ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ: 23.11.2000ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿದೆಯೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1) ಕರ್ನಾಟಕ ಮಾರಾಟ ತೆರಿಗೆ (2ನೇ ತಿದ್ದುಪಡಿ) ವಿಧೇಯಕ, 2000.

2) ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ, 2000.

8. ಶಾಸನ ರಚನೆ

ಪರ್ಯಾಲೋಚನಾ ಪ್ರಸ್ತಾವ (ಮುಂದು)

(i) ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ವಿಧೇಯಕ 2000.

+ ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) :— ಸನ್ಮಾನ್ಯ ಅಧ್ಯಕ್ಷರೆ, ಇವೊತ್ತು 2000ದ ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ವಿಧೇಯಕವನ್ನು ಸದನದಲ್ಲಿ ಮಂಡಿಸಿದ್ದು ಇಂತಹ ವಿಧೇಯಕವನ್ನು ತಂದಿರುವುದಕ್ಕೆ ನಾನು ಮೊದಲನೆಯದಾಗಿ ಸರ್ಕಾರವನ್ನು ಅಭಿನಂದಿಸಲಿಚ್ಛಿಸುತ್ತೇನೆ. ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರಾಗಿರುವ ಪ್ರೋ. ಬಿ.ಕೆ. ಚಂದ್ರಶೇಖರ್ ರವರು ಹೇಳಿರುವಂತೆ, ಸದರಿ ವಿಧೇಯಕ ಕಾನೂನಾಗಿ ಐವತ್ತು ವರ್ಷಗಳ ಹಿಂದೆ ಸ್ವಾತಂತ್ರ್ಯ ಬಂದ ತಕ್ಷಣವೇ ಬಂದಿದ್ದರೆ, ಕಳೆದ ಐವತ್ತು ವರ್ಷಗಳಲ್ಲಿ ದೇಶದಲ್ಲಿ ಜರುಗಿದ ಅನೇಕ ಅನಾಹುತಗಳನ್ನು ನಾವು ಕಾಣುವುದಕ್ಕಾಗುತ್ತಿರಲಿಲ್ಲ. ಆದರೂ ಈ ಕುರಿತಾದ ವಿಧೇಯಕ ಇವೊತ್ತು ಬಂದಿದೆ. ಮೊದಲು ಈ ವಿಧೇಯಕ ತಮಿಳುನಾಡಿನಲ್ಲಿ 1997ನೇ ಮೇ ತಿಂಗಳಿನಲ್ಲಿ ಜಾರಿಗೆ ಬಂದಿತು. ಪ್ರಾಯಶ: ಈ ದೇಶದಲ್ಲಿ ಮಾಹಿತಿ ಪಡೆಯುವ ಹಕ್ಕನ್ನು ಜಾರಿಗೆ ಕೊಟ್ಟಂಥ ಮೊದಲ ರಾಜ್ಯ ತಮಿಳುನಾಡು. ನಂತರ ಅದೇ ರೀತಿ ಗೋವಾ ರಾಜ್ಯದಲ್ಲಿ 1997ನೇ ಇಸವಿ ಅಕ್ಟೋಬರ್ ತಿಂಗಳಿನಲ್ಲಿ ಜಾರಿಗೆ ಕೊಟ್ಟರೆ, 1998ನೇ ಮೇ ತಿಂಗಳಿನಲ್ಲಿ ಮಧ್ಯಪ್ರದೇಶ ರಾಜ್ಯ ಜಾರಿಗೆ ಕೊಟ್ಟಿತ್ತು. ತೀರಾ ಇತ್ತೀಚೆಗೆ ಎಂದರೆ 2000ನೇ ಮೇ ತಿಂಗಳಿನಲ್ಲಿ ರಾಜಸ್ಥಾನ ಸರ್ಕಾರ ಕೂಡ ಮಾಹಿತಿ ಹಕ್ಕಿನ ಮಹತ್ವವನ್ನು ಮನಗಂಡು, ಈ ಹಕ್ಕನ್ನು ನಾಗರಿಕರಿಗೆ ಕೊಟ್ಟಿದೆ. ಸಂವಿಧಾನದ ರೀತ್ಯವೇ ಮಾಹಿತಿ ಹಕ್ಕನ್ನು ನಾಗರಿಕರಿಗೆ ಕೊಡಬೇಕಾಗಿತ್ತು. ತಡವಾಗಿಯಾದರೂ ಇವೊತ್ತು ನಮ್ಮ ರಾಜ್ಯದಲ್ಲಿ ಈ ಕುರಿತಾದ ಮಸೂದೆಯನ್ನು ತರುತ್ತಿರುವುದಕ್ಕೆ ನಾನು ಮತ್ತೊಮ್ಮೆ ಸ್ವಾಗತಿಸುತ್ತೇನೆ. ಈಗಾಗಲೇ ಮಸೂದೆ ಕುರಿತು ಭ್ರಷ್ಟಾಚಾರದ ಬಗ್ಗೆ ಕಾಮಗಾರಿ ವಿಳಂಬವಾಗಿರುವುದರ ಬಗ್ಗೆ ಮಾನ್ಯ ಸಚಿವರು ಹೇಳಿದರು. ಮಾನ್ಯ ಅಧ್ಯಕ್ಷರೆ, ಯಾವುದೇ ಸರ್ಕಾರ it should be SMART GOVEARNMENT